ಸಾವಿರ ಕೊಡುತ್ತೇನೆಂದಾಗ ರಾಮಕ್ಕನು ದಂಗಾದಳು. ಒಂದ್ಯೆನೂರೋ ಆರುನೂರೋ ಸಿಕ್ಕರೆ ಅದೆ ಮಹಾಪ್ರಸಾದ ಎಂದುಕೊಂಡಿದ್ದವಳಿಗೆ ತಿಂಗಳಿಗೆ ಎರಡು ಸಾವಿರ ದೊಡ್ಡ ಮೊತ್ತವೆ ಆಗಿತ್ತು. ಇಟ್ಟಿಗೆ ಭಟ್ಟಿಯಲ್ಲಿ ಸಿಕ್ಕುವ ಸಂಬಳವು ಹೇಗೂ ಮನೆಯ ಖರ್ಚಿಗಾಗುವಾಗ ಹೆಚ್ಚುವರಿ ಎರಡು ಸಾವಿರ ಮಕ್ಕಳ ಖರ್ಚಿಗೆ ಆದಾತು ಎಂದು ಖುಷಿಯಾಯಿತು. ತನಗೆ ದೊರೆತ ಹೊಸ ಆದಾಯ ಮೂಲದ ಬಗ್ಗೆ ಗಂಡನಿಗೆ ಹೇಳುವುದೋ ಬೇಡವೋ, ಹೇಳಿದರೆ ದುಡಿಮೆಯಿಲ್ಲದೆ ಬೀದಿ ಅಲೆಯುವ ಸೋಮಾರಿಯೂ ಪರಸ್ತ್ರೀಯರ ಹಿಂದೆ ಸುತ್ತುವ ಚಪಲ ಚೆನ್ನಿಗನೂ ಆದ ಅವನು ಅದರಲ್ಲೂ ಪಾಲಿಗೆ ಬಂದಾನೋ? ಎಂಬ ಸಂಶಯದ ಸುಳಿಯಲ್ಲೆ ಸಿಕ್ಕ ರಾಮಕ್ಕನು, ನಿಧಾನಕ್ಕೆ ಹೇಳಿದರಾಯಿತು ಎಂಬ ತೀರ್ಮಾನಕ್ಕೆ ಬಂದು ನಿರುಮ್ಮಳವಾದಳು. ಆಶ್ರಯದಾತನಾದ ರಾಜಪ್ಪನನ್ನು ಗೌರವದಿಂದ ರಾಜಪ್ಪಸಾಮಿ ಎಂದೇ ಕರೆಯಲಾರಂಭಿಸಿದಳು.

* * *

ಹೀಗೆ ತಾನು ಬಯಸುತ್ತಿದ್ದ ಪಾರ್ಟ್‌ಟೈಮು ಅದಾಯದಿಂದ ಸಂತೃಪ್ತಳಾದ ರಾಮಕ್ಕನು ಎರಡು ಸಾವಿರ ರೂಪಾಯಿನ ಮೇಲಿನ ಭಕ್ತಿ ಮತ್ತು ಶ್ರದ್ಧೆಯಿಂದ ಪ್ರತಿದಿನವೂ ತಪ್ಪದೆ ಆಶ್ರಮಕ್ಕೆ ಹೋಗಿ ಆಶ್ರಮದ ಒಳಹೊರಗನ್ನೆಲ್ಲಾ ಕಸಗುಡಿಸಿ ಶುದ್ಧಗೊಳಿಸಿ ವ್ಯವಸ್ಥಾಪಕ ರಾಜಪ್ಪನು ಹೇಳದಿದ್ದರೂ ಅಂಗಳವನ್ನೆಲ್ಲಾ ಗುಡಿಸಿ ಆಶ್ರಮದಲ್ಲಿದ್ದ ದನಗಳನ್ನು ನೋಡಿಕೊಳ್ಳಲು ನಿಯುಕ್ತನಾಗಿದ್ದ ನಿಂಗಯ್ಯನು ಕೊಟ್ಟಿಗೆಯನ್ನು ಗುಡಿಸಿ ಒಟ್ಟು ಮಾಡಿದ್ದ ಸಗಣಿಯಿಂದ ಸಾರಿಸಿಬಿಡುತ್ತಿದ್ದಳು. ಜೊತೆಗೆ ಉಳಿದ ಸಗಣಿ ಬಗ್ಗಡವನ್ನು ಅಲ್ಲೆ ದೇವರ ಪೂಜೆಗೆಂದು ಹಾಕಿಕೊಂಡಿದ್ದ ಸೇವಂತಿಗೆ, ಕಣಗಿಲು, ದಾಸವಾಳ ಮೊದಲಾದ ಹೂವಿನ ಗಿಡಗಳ ಮತ್ತು ತುಳಸಿ ಗಿಡಗಳ ಬುಡಕ್ಕೆ ಹಾಕಿಬಿಡುತ್ತಿದ್ದಳು. ಹೀಗೆ ಹೆಚ್ಚುವರಿಯಾಗಿ ಸಿಕ್ಕುತ್ತಿದ್ದ ಸಗಣಿ ಗೊಬ್ಬರದಿಂದ ಹೂಗಿಡಗಳೂ ನಳನಳಿಸತೊಡಗಿ ಮೈತುಂಬಾ ಹೂ ಬಿಡುತ್ತಾ ಸೊಗಸಾಗಿ ಕಾಣಿಸತೊಡಗಿದವು. ತುಳಸೀ ಗಿಡಗಳು ಬೆಳೆದು ಬೀಜವನ್ನು ಚೆಲ್ಲುತ್ತಾ ಚೆಲ್ಲುತ್ತಾ ಅಲ್ಲೊಂದು ತುಳಸೀ ವನವೇ ನಿರ್ಮಾಣವಾಯಿತು. ಅವಳ ಈ ಗೋಮಯ ಸೇವೆಯಿಂದ ಆಶ್ರಮಕ್ಕೆ ಒಂದು ಸಾತ್ವಿಕ ಕಳೆಯೂ ಬರತೊಡಗಿತ್ತು.

ಅವಳ ಈ ಸೇವೆಯಿಂದ ಸಂತೃಪ್ತಗೊಂಡ ವ್ಯವಸ್ಥಾಪಕ ರಾಜಪ್ಪನು ಅವಳ ಸಂಬಳವನ್ನೇನೂ ಹೆಚ್ಚಿಸದಿದ್ದರೂ ಅವಳು ಆಗಾಗ ಮಕ್ಕಳಿಗೆಂದು ಆಶ್ರಮದ ಹಸುಗಳ ಹಾಲನ್ನು ತೆಗೆದುಕೊಂಡು ಹೋಗುತ್ತಿದ್ದರೂ ಅದಕ್ಕೇನೂ ಹೇಳದೆ ಸುಮ್ಮನಾಗಿಬಿಟ್ಟ. ಅಷ್ಟೇ ಅಲ್ಲದೆ ಅವಳ ಮೇಲೆ ಒಂದು ರೀತಿಯ ನಂಬಿಕೆಯೂ ಬಂದದ್ದರಿಂದ ಆಶ್ರಮದ ಒಳಗೆಲ್ಲ ಎಲ್ಲಿ ಬೇಕಾದರೂ ಓಡಾಡಿಕೊಳ್ಳುವ ಸ್ವಾತಂತ್ರ್ಯವೂ ಅವಳಿಗೆ ದೊರಕಿತ್ತು.

ಹೀಗೆ ಒಂದಷ್ಟು ದಿನಗಳು ಕಳೆದಾಗ ಒಂದು ದಿನ ಸಂಜೆ ಆಶ್ರಮದ ಕಸ ಗುಡಿಸಲು ಬಂದ ರಾಮಕ್ಕನಿಗೆ ಅಂಗಳದಲ್ಲಿ ಮಾಮೂಲಿನಂತೆ ಅಡ್ಡಾಡುವ ರಾಜಪ್ಪಸಾಮಿಯು ಕಾಣಿಸಲಿಲ್ಲ. 'ಈ ಸಾಮಿಯು ಇವತ್ತೆಲ್ಲಿ ಹ್ವಾಗಿರಬಹುದು ಕಾಣಿಸುತ್ತಿಲ್ಲವಲ್ಲ' ಎಂದುಕೊಳ್ಳುತ್ತಲೆ ಮೊದಲು ಒಳಗನ್ನೆಲ್ಲ ಗುಡಿಸಿ ಆಮೇಲೆ ಮರಗಳಡಿಯ ತರಗೆಲೆಗಳನ್ನು ತೆಗೆಯುವ ಎಂದುಕೊಳ್ಳುತ್ತಾ ಮನೆಯ ಒಳಗೆ ಹೋದಳು. ಒಂದೊಂದು ರೂಮಿನ ಕಸ ಗುಡಿಸಿಕೊಳ್ಳುತ್ತಾ ರಾಜಪ್ಪನು ಮಲಗುವ ಕೋಣೆಗೆ ಹೋದರೆ ಅಲ್ಲಿ ರಾಜಪ್ಪನು ಟೀವಿ ನೋಡುತ್ತಾ ಕುಳಿತಿದ್ದುದು ಕಾಣಿಸಿತು. ರಾಮಕ್ಕನು ಬಂದದ್ದನ್ನೂ ಗಮನಿಸದೆ ರಾಜಪ್ಪನು ಖುರ್ಚಿಯ ತುದಿಯಲ್ಲಿ ಕುಳಿತು, ಬೆರಳು ಕಚ್ಚುತ್ತಾ ತದೇಕ ಚಿತ್ತನಾಗಿ ಟೀವಿಯನ್ನು ನೋಡುತ್ತಿದ್ದ. ರಾಮಕ್ಕ ನಿಂತಿದ್ದ ಜಾಗಕ್ಕೆ ಟೀವಿಯಲ್ಲೇನು ಬರುತ್ತಿದೆ ಎಂಬುದು ಕಾಣದಿದ್ದರೂ ಈ ರಾಜಪ್ಪ ಸಾಮಿಯು ನಾನು ಬಂದದ್ದೂ ಗಮನಿಸದೆ ಅದೇನು ನೋಡುತ್ತಿರಬಹುದೋ ಎಂದು ಅಚ್ಚರಿಯಾಗತೊಡಗಿತು. ಆತನನ್ನು ಮಾತನಾಡಿಸಿ ತೊಂದರೆ ಕೊಡಬಾರದೆಂದು ರಾಮಕ್ಕನೂ ಸುಮ್ಮನೆ ಪೊರಕೆ ಹಿಡಿದು ರೂಮಿನ ಬಾಗಿಲಲ್ಲಿ ನಿಂತುಬಿಟ್ಟಳು.

ಕೆಲ ಸಮಯದಲ್ಲಿ ಟೀವಿಯನ್ನು ಬಂದು ಮಾಡಿದ ರಾಜಪ್ಪನು ತಿರುಗಿ ನೋಡಿದರೆ ಬಾಗಿಲಲ್ಲಿ ರಾಮಕ್ಕ!

ಅದೇನೋ ಭಯದಿಂದ ಅವನ ಮುಖದ ರಕ್ತವೆಲ್ಲ ಇಂಗಿ ಬಿಳಿಚಿಕೊಂಡಿತು. ಒಂದು ರೀತಿಯ ಭಯದಲ್ಲಿ ತೊದಲುತ್ತಲೆ 'ಏ... ಏ... ರಾಮಕ್ಕ ಇಲ್ಲೇನು ಮಾಡ್ತಾ ಇದೀಯ?' ಎಂದು ಕೇಳಿದ.

'ಏನೂ ಇಲ್ಲ ರಾಜಪ್ಪಸಾಮಿ. ರೂಮು ಗುಡ್ಸಾಕ್